O.S. NO. 135/2022
DW - 2 .
Dated 04-04-2026.

ಸಾಕ್ಷಿಯನ್ನು ಈ ದಿನ ದಿನಾಂಕ 04-04-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಎಮ್ ವಾಯ್ ಎಸ್ ವಕೀಲರಿಂದಃ

ಪ್ರಸ್ತುತ ದಾವೆಯನ್ನು ಬಾಳಪ್ಪನ ಅಣ್ಣ ತಮ್ಮಂದಿರು ಏತಕ್ಕಾಗಿ ಮಾಡಿದ್ದರೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಗಳ ಸರ್ವೆ ನಂ. 48/2/3/4 ಮತ್ತು ಇರುತ್ತವೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯಲು ಮಾಹಿತಿ ವಕಿಲರಿಗೆ ನಾನೇ ಕೊಟ್ಟಿರುತ್ತೇನೆ. ಜಮಿನುಗಳನ್ನು ನನ್ನ ಕಾಕಾನ ಮಗನಾದ ರಾಯಪ್ಪರವರಿಂದ ಯಲ್ಲಪ್ಪರವರು ಖರೀದಿ ಮಾಡಿರುತ್ತಾರೆ. ಯಾವಾಗ ಖರೀದಿ ಮಾಡಿದ್ದಾರೆ ಎಂದರೆ ನನಗೆ ಇಸವಿ ಗೊತ್ತಿಲ್ಲ. ಸದರಿ ದಾವಾ ಆಸ್ತಿಗಳ ಪೈಕಿ ಸರ್ವೆ ನಂ. 158/2 ಮತ್ತು ಸರ್ವೆ ನಂ. 158/3 ಯಾರು ಯಾರರಿಂದ ಖರೀದಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಸದರಿ ಜಮಿನುಗಳು ಯಾರು ಯಾರಿಂದ ಯಾವಾಗ ಖರೀದಿ ಮಾಡಿದರು ಎಂದು ಹೇಳಿ ಬರೆಸಿಲ್ಲ. ಬಾಳಪ್ಪರವರಿಗೆ 7 ಜನ ಮಕ್ಕಳು ಇರಬಹುದು. ಸದರಿ 7 ಜನ ಮಕ್ಕಳಲ್ಲಿ ಯಲ್ಲಪ್ಪ ಎಂಬುವವರು ಹಿರಿಯವನು ಎಂದರೆ ನಿಜ. ಸದರಿಯವರ ಮನೆತನದ ಹಿರೇತನ ನಾನು ಮಾಡುತ್ತಿರಲಿಲ್ಲ. ಯಲ್ಲಪ್ಪ 1 ನೇ ಪ್ರತಿವಾದಿ ಯಲ್ಲವ್ವಳನ್ನು ಯಾವಾಗ ಮದುವೆ ಆದನು ಎಂದು ನನಗೆ ಗೊತ್ತಿಲ್ಲ. ಅವರು ಮದುವೆ ಆಗಿ ಎಷ್ಟು ದಿನಗಳ ವರೆಗೆ ಕೂಡಿ ಜೀವನ

ಮಾಡಿದ್ದಾರೆ ಮತ್ತು ಯಾವಾಗ ಬೇರೆ ಆದರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ವಾದಿಯರು ಮತ್ತು ಪ್ರತಿವಾದಿಯರ ಮದ್ಯೆ ವಾಟ್ನಿ ಆದ ಬಗ್ಗೆ ದಾಖಲಾತಿಗಳು ಇವೆಯಾ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಊರಿಗಳಲ್ಲಿ ಕುಟುಂಬದ ಆಸ್ತಿಗಳಲ್ಲಿ ಪಾಲು ವಿಬಾಗ ಮಾಡುವಾಗ ಪಾಲು ವಿಬಾಗ ಕುರಿತು ಸ್ಮರನಾರ್ಥ ಟಿಪ್ಪಣಿ ಬರೆಯುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬರೆಯುತ್ತಾರೆ ಕೆಲವರು ಬರೆಯುವುದಿಲ್ಲ ಅಪಸಾತನಲ್ಲಿ ಪಾಲು ವಿಬಾಗ ಮಾಡಿಕೊಳ್ಳುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಸರ್ವೆ ನಂ. 48/2, 48/3, 48/4 ರ ಪೈಕಿ ಉತ್ತರ ದಿಕ್ಕಿನ 20 ಗುಂಟೆ ಜಮಿನು ಶಂಕರೆಪ್ಪ , ಅದರ ಬಾಜು 20 ಗುಂಟೆ ಶಿವಪ್ಪ , ಸದರಿ ಶಿವಪ್ಪನ ಬಾಜು ಬಸವಣ್ಣೆಪ್ಪ 20 ಗುಂಟೆ ಜಮಿನು, ಅದರ ಬಾಜು 20 ಗುಂಟೆ ಜಮಿನು ಹಣಮಂತಪ್ಪ ಮತ್ತು ಅದರ ಬಾಜು 20 ಗುಂಟೆ ಫಕಿರಪ್ಪ ಮಾಡುತ್ತಿದ್ದರು, ಕೊನೆಯ ಬಾಜು ಉಳಿದ 36 ಗುಂಟೆ ಜಮಿನು ಯಲ್ಲಪ್ಪ ಸಾಗುವಳಿ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ಬಸವಣ್ಣೆಪ್ಪನ 20 ಗುಂಟೆ ಜಮಿನು ನನ್ನ ತಮ್ಮ ಬಸಪ್ಪ ಪಾಲಿನಿಂದ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಫಕಿರಪ್ಪನ 20 ಗುಂಟೆ ಜಮಿನು ಸಹ ನನ್ನ ತಮ್ಮ ಬಸಪ್ಪ ಪಾಲಿನಿಂದ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಹೀಗೆ ನನ್ನ ತಮ್ಮ ಬಸಪ್ಪರವರು ಬಸವಣ್ಣೆಪ್ಪನ 20 ಗುಂಟೆ ಮತ್ತು ಫಕಿರಪ್ಪನ 20 ಗುಂಟೆ ಜಮಿನು ಸುಮಾರು 3 ವರ್ಷ ಪಾಲಿನಿಂದ ಸಾಗುವಳಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಸಪ್ಪ ನಾಗಪ್ಪ ಸಂಗಮೆ ಇವರದು 15 ವರ್ಷಗಳ ಹಿಂದೆ ಕೊಲೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೊಲ ಪ್ರಕರಣದಲ್ಲಿ ನಾನು ಮತ್ತು ನನ್ನ ತಮ್ಮ

ಬಸಪ್ಪ ಆರೋಪಿಗಳು ಆಗಿದ್ದೇವು ಎಂದರೆ ಸಾಕ್ಷಿ ನಮಗೆ ಆರೋಪಿ ಅಂತಾ ಸೇರಿಸಿದ್ದರು ಆದರೆ ಅವರ ಕೊಲೆ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಪ್ರಕರಣದಲ್ಲಿ ನಾವು 2 ವರ್ಷಗಳ ವರೆಗೆ ಜೈಲಿನಲ್ಲಿ ಇದ್ದೇವು ಎಂದರೆ ನಿಜ. 9 ನೇ ವಾದಿಯ ಪರಿಚಯು ನನಗೆ ಇದೆ. 1 ವರೆ ವರ್ಷಗಳ ಹಿಂದೆ 9 ನೇ ವಾದಿ ಮತ್ತು ನನ್ನ ಮಗ ಪ್ರಕಾಶನ ಮದ್ಯೆ ಗಲಾಟೆ ಆಗಿತ್ತು ಎಂದರೆ ನಿಜ. ಸದರಿ ಗಲಾಟೆಯಲ್ಲಿ ನನ್ನ ಮಗ ಪ್ರಕಾಶ 9 ನೇ ವಾದಿಯ ಕತ್ತಿಗೆ ಗುದ್ದಿದ್ದನು ಅದರಿಂದ ಆತನ ಬಾಯಿಂದ ರಕ್ತ ಬಂದು ಪ್ಯಾರಾಲಸಿಸ ಆದಂತೆ ಆಗಿತ್ತು ಎಂದರೆ ಸರಿಯಲ್ಲ. ಈ ಕುರಿತು ನೇಸರಗಿ ಪೊಲಿಸ ಠಾಣೆಯಲ್ಲಿ ನನ್ನ ಮಗ ಪ್ರಕಾಶನ ವಿರುದ್ಧ ಕ್ರಿಮಿನಲ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 9 ನೇ ವಾದಿ ನನ್ನ ಮಗ ಪ್ರಕಾಶನಿಂದ ದಂಡ ಪಡೆದಿರುತ್ತಾನೆ ಎಂದು ನುಡಿದಿರುತ್ತಾರೆ. 9 ನೇ ವಾದಿ ಯೆಂದಿಗೆ ರಾಜಿ ಮಾಡಕೊಂಡು ನನ್ನ ಮಗ ಪ್ರಕಾಶ 9 ನೇ ವಾದಿಯ ಔಷದೊಪಚಾರ ಕುರಿತು ರೂ 1 ಲಕ್ಷ ಕೊಟ್ಟಿ ರಾಜಿ ಮಾಡಿಕೊಂಡಿರುತ್ತೇವೆ ನನಗೆ ಗೊತ್ತಿಲ್ಲ. ಸದರಿ ಗಲಾಟೆ ಕುರಿತು ಹಿರೇತನ ಮಾಡಿ 9 ನೇ ವಾದಿ ಗೆ ರೂ 1 ಲಕ್ಷ ಕೊಟ್ಟು ಪ್ರಕರಣ ಮುಗಿಸಿರುತ್ತೇವೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಹೀಗಾಗಿ ನಮ್ಮ ಮತ್ತು ವಾದಿಗಳ ಮದ್ಯೆ ಮನಸಾ ಮನಸು ಸರಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಂಗಪ್ಪ ಗಂಗಪ್ಪ ಕುರಗುಂದ ರವರ ಹಾದಿ ಮೇಲೆ ಇದ್ದ ಹೊಲ ಖರೀದಿ ಮಾಡಬೇಕೆಂದು ವಿಚಾರ ಮಾಡಿದ್ದೇವು ಎಂದರೆ ಸರಿ. ಸದರಿ ನಿಂಗಪ್ಪ ತನ್ನ ಹೆ

ಹೊಲವನ್ನು ನನಗೆ ಖರೀದಿ ಕೊಡದೇ ಸಿದ್ದಪ್ಪ ಕೊರವಾಡ ಎಂಬುವವರಿಗೆ ಮಾರಾಟ ಮಾಡಿದರು ಎಂದರೆ ಸರಿ. ಸದರಿ ನಿಂಗಪ್ಪರವರ ಮಾರಾಟ ಮಾಡಿದ ಹೊಲದ ಬಾಜು ನಮ್ಮ ಮಾಲ್ಕಿ ಜಮಿನು ಇದೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿರುವ 3 ನೇ ಪ್ರತಿವಾದಿ ನನಗೆ ಪ್ರಕರಣ ತನ್ನ ಪರವಾಗಿ ಆದರೆ ದಾವಾ ಆಸ್ತಿಯಲ್ಲಿ ತನಗೆ ಬರುವ ಪಾಲನ್ನು ನನಗೆ ಖರೀದಿ ಕೊಡುತ್ತೇನೆ ಎಂದು ಹೇಳಿದ್ದನು ಎಂದರೆ ಸರಿಯಲ್ಲ. ಹೀಗಾಗಿ ಆತನ ಹೊಲ ಖರೀದಿಗೆ ಸಿಗುತ್ತದೆ ಅಂತಾ ಆತನ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಬಸವಣ್ಣೆಪ್ಪನ ಮಕ್ಕಳು ಎಷ್ಟು ಜನ ಮತ್ತು ಅವರು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಖರೀದಿ ಮಾಡಿದ ಹೊಲದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಬಸವಣ್ಣೆಪ್ಪನ ಮಗ ಏನು ಮಾಡುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆ ಸಾಕ್ಷಿ ಯಲ್ಲಿ ವೇಳೆಯಲ್ಲಿ ನಾನು ಹಾಜರು ಮಾಡಿದ ದಾಖಲಲಾತಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ . 10 ನೇ ವಾದಿ ಶಂಕರೆಪ್ಪನ ಮಗ ಸೊಮಲಿಂಗ ರವರಿಗೆ ಸೇರಿದ ಒಂದು ಕಿರಾಣಿ ಅಂಗಡಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಿರಾಣಿ ಅಂಗಡಿಯಿಂದ ಆತನಿಗೆ ಉತ್ಪನ್ನ ಎಷ್ಟು ಬರುತ್ತದೆ ಮತ್ತು ಆತ ಹೇಗೆ ಆಸ್ತಿ ಖರೀದಿ ಮಾಡಿದನು ಎಂದು ನನಗೆ ಗೊತ್ತಿಲ್ಲ. ಆ ಕುರಿತು ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಹೇಳಿ ಬರೆಸಿಲ್ಲ. ಯಲ್ಲಪ್ಪನ ಮಗ ರಾಮಪ್ಪ 20 ಗುಂಟೆ ಖರೀದಿ ಮಾಡಿ ಕೋಳಿ ಪಾರ್ಮ ಇಟ್ಟಿದ್ದಾರೊ ಇಲ್ಲವೊ ಎಂದು

ನನಗೆ ಮಾಹಿತಿ ಇರುವುದಿಲ್ಲ. ಯಲ್ಲಪ್ಪ ಹೊಲ ಹೇಗೆ ಖರೀದಿ ಮಾಡಿದನು ಎಂದು ನನಗೆ ಗೊತ್ತಿದೇಯಾ ಎಂದರೆ ಸಾಕ್ಷಿ ನನ್ನ ಕಾಕಾನ ಮಗನಿಂದ ಹೊಲ ತೆಗೆದು ಕೊಳ್ಳುತ್ತಿದ್ದೆನೆ ನಿವೇನೆದಾರೂ ಆತನ ಹೊಲ ಖರೀದಿಸುತ್ತಿರಾ ಎಂದು ನನಗೆ ಕೇಳಿದರು ಆಗ ನಾನು ಅವರಿಗೆ ನನ್ನ ಹತ್ತಿರ ಹಣ ಇಲ್ಲ ನೀವೇ ಖರೀದಿ ಮಾಡಿಕ್ಕೊಳಿ ಎಂದು ತಿಳಿಸಿದೇನು ಎಂದು ನುಡಿದಿರುತ್ತಾರೆ. ಯಲ್ಲಪ್ಪ ಯಾವ ಉತ್ಪನ್ನದಿಂದ ಹೊಲ ಖರೀದಿ ಮಾಡಿದನು ಎಂದು ಗೊತ್ತಿದೆಯಾ ಎಂದರೆ ಬಹಳ ದಿನಗಳು ಆಯ್ತು ಹೀಗಾಗಿ ಗೊತ್ತಿರುವುದಿಲ್ಲ. ಬಾಳಪ್ಪನ ಹಿರೇಮಗ ಯಲ್ಲಪ್ಪ ಅಂತಾ ಆತನ ಹೆಸರಿನಲ್ಲಿ ಹೊಲ ಖರೀದಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಯಲ್ಲಪ್ಪ ಯಾವ ಬ್ಯಾಂಕನಿಂದ ಮತ್ತು ಎಷ್ಟು ಸಾಲ ಪಡೆದಿದ್ದನು ಎಂದು ನನಗೆ ಮಾಹಿತಿ ಇದೇಯಾ ಎಂದರೆ ಇಲ್ಲ. ಆ ಕುರಿತು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ಸಾಮಾನ್ಯವಾಗಿ ಮನೆ ಹಿರೇತನ ಮಾಡುವ ವ್ಯಕ್ತಿಗಳ ಹೆಸರಿನಲ್ಲಿ ಬ್ಯಾಂಕನವರು ಸಾಲ ಕೊಡುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಮತ್ತು ವಾದಿಗಳ ಮದ್ಯೆ ಇರುವ ಹಳೆಯ ವೈಶಮ್ಯದಿಂದಾಗಿ ಮತ್ತು 3 ನೇ ಪ್ರತಿವಾದಿ ನನಗೆ ಹೊಲ ತನ್ನಂತೆ ಆದರೆ ನನಗೆ ಖರೀದಿ ಕೊಡುತ್ತೇನೆ ಎಂದು ಹೇಳಿದ್ದರಿಂದ ಅವರಿಗೆ ಅನೂಕೂಲ ಆಗಲಿ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

O.S. NO. 135/2022

DW - 2 .

Dated 04-04-2026.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.